ಅಂದ್ರೆ ರಕ್ತದಾಹ ಅಂತ ಹೇಳಿದ್ರು. ವ್ಯಾಂಪೇರ್ ಎನ್ನುವ ರಕ್ತ ಕುಡಿಯುವ ಬಾವಲಿಯಿಂದ ಈ ಹೆಸರು ಬಂದಿದ್ದಂತೆ. ಯಾವುದೇ ಸನ್ನಿವೇಶದಲ್ಲೂ ಒಂದರ ಮೇಲೆ ಅಳಿಸಲಾಗದ ದ್ವೇಷ ಬಂದುಬಿಟ್ಟರೆ ಮನುಷ್ಯ ಯಾವ ಮಟ್ಟಕ್ಕೆ ಬೇಕಾದ್ರೂ ಇಳಿತಾನೆ. ಇತ್ತೀಚೆಗೆ ದಿನಪತ್ರಿಕೆಯೊಂದರಲ್ಲಿ ಓದಿದ್ದೆ ಅಂಕಲ್. ಉತ್ತರಭಾರತದ ಹಳ್ಳಿಯೊಂದರಲ್ಲಿ ಒಬ್ಬ ವಿಷಪೂರಿತ ಹಾವುಗಳನ್ನೇ ಆಗಾಗ ತಿನ್ನುತ್ತಾನಂತೆ! ಚಿಕ್ಕ ವಯಸ್ಸಿನಲ್ಲಿ ಒಮ್ಮೆ ಆತ ಪ್ರಾಣಾಪಾಯದಲ್ಲಿದ್ದಾಗ ತನ್ನನ್ನು ಉಳಿಸಿಕೊಳ್ಳಲು ಹಾವೊಂದನ್ನು ತಿಂದಿದ್ದಾನೆ. ಹಾವಿನ ಮೇಲಿನ ಅವನ ದ್ವೇಷ, ಭಯ ಹೀಗೆ ಚಟವಾಗಿ ಪರಿಣಮಿಸಿದೆ, ಭರತನೂ ಅಂಥ ಮಾನಸಿಕ ವಕ್ರತೆಗೆ ಒಳಗಾಗಿದ್ದಾನೆ. ಕಾಲೇಜಿನ ಹಾಸ್ಟೆಲ್ ಹುಡುಗರಿಂದ ಅವನು ನಿರಂತರವಾಗಿ ಅನುಭವಿಸಿದ ನೋವು, ಮಾನಸಿಕ ಹಿಂಸೆ ಅವನನ್ನು ವ್ಯಾಂಪಿರಿಸಂ ನಂತಹ ಭಯಂಕರ ಮಾನಸಿಕ ಕಾಯಿಲೆಗೆ ದೂಡಿದೆ..' ಹೇಮಂತ ವಿವರಿಸಿದಾಗ ಎಲ್ಲರಿಗೂ ಸಂಕಟವಾಯಿತು. ಕೋಟೆ ಬಂಗಲೆಯ ರಾಜಕುಮಾರನಾಗಿ ಹುಟ್ಟಿ, ಮಾನಸಿಕ ವಿಕೃತಿಗೆ ಒಳಗಾಗಿ ಸರಣಿ ಕೊಲೆಗಳನ್ನು ಮಾಡಿ, ತಲೆತಗ್ಗಿಸಿಕೊಂಡು ಪೊಲೀಸರ ಜೊತೆ ಹೋಗುತ್ತಿದ್ದ ಅವನನ್ನು ಎಲ್ಲರೂ ಮರುಕದಿಂದ ನೋಡಿದರು.

ಕೋಟೆ ಬಂಗಲೆಯ ಮುಂದೆ ವಿವಿಧ ಮಾಧ್ಯಮದವರು ಜಾತ್ರೆಯಂತೆ ನೆರೆದಿದ್ದರು. ಟೀವಿ ಚಾನೆಲ್‌ಗಳಲ್ಲಿ ಸರಣಿ ಕೊಲೆಗಾರನ ನೈಜರೂಪವನ್ನೂ, ಕೋಟೆ ಬಂಗಲೆಯನ್ನೂ ಮತ್ತೆ ಮತ್ತೆ ತೋರಿಸಲಾಗುತ್ತಿತ್ತು. ಇದುವರೆಗೆ ತನ್ನದೇ ಗಂಭೀರತೆಯಲ್ಲಿ ಮೆರೆದ ಕೋಟೆ ಬಂಗಲೆ ಈಗ ರಕ್ತದಾಹಿ ಸೈತಾನನನ್ನು ಪೋಷಿಸಿದ ಬಂಗಲೆಯೆಂದು ಕುಖ್ಯಾತಿ ಪಡೆಯಿತು.

ಆ ರಾತ್ರಿ ಎಲ್ಲರೂ ನಿದ್ರಿಸಿದ ಮೇಲೆ ಕೋಟೆ ಬಂಗಲೆಯ ಸ್ತ್ರೀ ಆಕೃತಿಯೊಂದು ನಿಧಾನವಾಗಿ ಮೇಲೆದ್ದು ಸೀರೆಯೊಂದನ್ನು ತೆಗೆದು ಫ್ಯಾನಿಗೆ ಕಟ್ಟಿ ನೇಣು ಹಾಕಿಕೊಳ್ಳತೊಡಗಿತ್ತು. ಹಾಗೆ ನೇಣು ಹಾಕಿಕೊಳ್ಳಲು ಉದ್ಯುಕ್ತಳಾದ ಸ್ತ್ರೀ ಆಕೃತಿ ಮತ್ಯಾರೂ ಆಗಿರದೆ ಋತುವಾಗಿದ್ದಳು...!

ಕೋಟೆಬಂಗಲೆಯಲ್ಲಿ ಈ ದಿನ ನಡೆದ ಘಟನೆ ಅವಳನ್ನು ಕಂಗಾಲಾಗಿಸಿತ್ತು. ಪ್ರೀತಿಯ ಸಹೋದರ ಭರತ ಮೈ ನಡುಗಿಸುವಂತಹ ರಕ್ತದಾಹಿಯಾಗಿ ಬದಲಾಗಿರುವುದನ್ನು ಅವಳ ಸೂಕ್ಷ್ಮವಾದ ಮನಸ್ಸು ಒಪ್ಪಿಕೊಂಡಿರಲಿಲ್ಲ. ಮನುಷ್ಯನ ರಕ್ತ ಹೀರುವ ಅವನು ಸೈತಾನನಂತೆಯೇ ಅವಳ ಕಂಗಳಿಗೆ ಕಾಣಿಸಿದ್ದ. ಜೊತೆಗೆ ರಮ್ಯಾಳ ತಂದೆ ಹರಿಕೃಷ್ಣರಿಂದ ತಾಯಿಯ ಬಗೆಗಿನ ಬಹಳಷ್ಟು ಸತ್ಯಸಂಗತಿಗಳೂ ತಿಳಿದು ಬಂದಿದ್ದವು. ಆ ಆಘಾತ ಒಂದೆಡೆಯಾದರೆ ಭರತನಿಂದ ಆದ ಆಘಾತ ಇನ್ನೊಂದು ಕಡೆ ಅವಳನ್ನು ಹೈರಾಣಾಗಿಸಿತ್ತು. ತಾನಿದ್ದರೆ ಇನ್ನು ಎಂತೆಂಥ ಸಂಕಟಗಳನ್ನು ನೋಡಬೇಕಾಗುತ್ತದೋ ಎಂದು ಹೆದರಿದ ಮನಸ್ಸು ಆತ್ಮಹತ್ಯೆಯತ್ತ ಮುಖ ಮಾಡಿತ್ತು. ಎಲ್ಲ ನೋವು ಸಂಕಟಗಳಿಗೆ ಶಾಶ್ವತ ವಿರಾಮ ದೊರಕಿಸಿ ಬಿಡುವ ಆತ್ಮಹತ್ಯೆಯ ಯೋಚನೆ ಆ ಕ್ಷಣಕ್ಕೆ ಅವಳಿಗೆ ಸಮಂಜಸವೆನಿಸಿತ್ತು. ನಡುನಡುವೆ ಹೇಮಂತನ ಯೋಚನೆಯೂ ಬಾರದಿರಲಿಲ್ಲ. ಹೇಮಂತ....ತನ್ನ 13 ವರ್ಷಗಳ ಪ್ರೇಮ ತಪಸ್ಸಿನ ನಂತರ ಸಿಕ್ಕಿದವನು. ಅವನೊಡನೆ ಬಾಳುವಾಸೆಯಿದ್ದರೂ ಬಂಗಲೆಯ ಇತ್ತೀಚಿನ ವಿದ್ಯಮಾನಗಳೂ ಅವಳನ್ನು ಕಂಗೆಡಿಸಿದ್ದವು. ಹೇಮಂತ ಕೋಟೆ ಬಂಗಲೆಯ ಅಳಿಯನಾಗಬಾರದೆಂದು ಕಾಣದ ಶಕ್ತಿಯೊಂದು ಯತ್ನಿಸುತ್ತಲೇ ಇದೆ. ತನ್ನ ಪಾಡಿಗೆ ತಾನಿರುತ್ತಿದ್ದವನಿಗೆ ಈಗ ತನ್ನ ಸಹವಾಸವಾದ ಮೇಲೆ ಪ್ರತೀಕ್ಷಣ ಆತಂಕದಲ್ಲೇ ಇರುವಂತಾಗಿದೆ. ಬೇಡ....ಇವೆಲ್ಲಾ ಇಲ್ಲಿಗೇ ಕೊನೆಯಾಗಿ ಬಿಡಬೇಕು. ಹೇಮಂತನನ್ನು ತಾನು ನೋಡಿಯಾಯಿತು. ಅವನ ಅಪೂರ್ವ ಪ್ರೀತಿ ತನಗೆ ಸಿಕ್ಕಿತು. ಈ ಜನ್ಮಕ್ಕೆ ಇಷ್ಟೇ ಸಾಕು.... ತನ್ನನ್ನು ತಾನು ಕೊನೆಗೊಳ್ಳಿಸಿಕೊಳ್ಳಬೇಕೆಂದು ನಿರ್ಧರಿಸಿ ಸದ್ದಿಲ್ಲದೆ ತನ್ನ ಸೀರೆಯೊಂದನ್ನು ಹುಡುಕಿ ತೆಗೆದಿದ್ದಳು.

ಆ ರಾತ್ರಿ ಬಹಳ ಭಯಾನಕವಾಗಿತ್ತು. ಸುಯ್ಯನೆ ಬೀಸುವ ಗಾಳಿಗೆ ಬಂಗಲೆಯ ಮರಗಿಡಗಳು ಹುಯಿಲಿಡುತ್ತಿದ್ದವು. ಎಲ್ಲಿಂದಲೋ ಗೂಬೆಯೊಂದು ಕರ್ಕಶವಾಗಿ ಕೂಗಿತ್ತು. ಹುಣ್ಣಿಮೆ ಹತ್ತಿರವಾಗುತ್ತಿರುವುದರ ಸೂಚನೆಯಾಗಿ ಬೆಳದಿಂಗಳು ಹರಡಿಕೊಂಡಿತ್ತು. ಸಾಯುವ ಮುಂಚೆ ಹೇಮಂತನಿಗೆ ಕೊನೆಯ ಸಂದೇಶವೊಂದನ್ನು ಕಳುಹಿಸಬೇಕೆನಿಸಿತು.

'ಹೇಮಂತ ಸಾರಿ....ನಿನ್ನನ್ನು ಬಿಟ್ಟು ಹೋಗ್ತಿದೀನಿ, ನಿನ್ನ ಪ್ರೀತಿ ಪ್ರತೀ ಜನ್ಮದಲ್ಲಿಯೂ ನನ್ನ ಜೊತೆಗಿರಲಿ....' ಸಂದೇಶವೊಂದನ್ನು ಟೈಪ್ ಮಾಡಿ ಹೇಮಂತನ ಮೊಬೈಲಿಗೆ ಕಳುಹಿಸಿ ನಿರಾಳವಾದಳು.

ಸಮಯ ರಾತ್ರಿಯ ಒಂದು ಗಂಟೆಯನ್ನು ತೋರಿಸುತ್ತಿತ್ತು. ಪಕ್ಕದಲ್ಲೇ ಗಾಢ ನಿದ್ರೆಯಲ್ಲಿದ್ದ ರಮ್ಯಾಳನ್ನೊಮ್ಮೆ ನೋಡಿದಳು ಋತು. ಬಾಗಿ ಮೃದುವಾಗಿ ಅವಳ ಹಣೆಯನ್ನು ಚುಂಬಿಸಿದಳು. ಮೇಲೆದ್ದು ಫ್ಯಾನಿಗೆ ಸೀರೆಯನ್ನು ಹಾಕಿ ಉರುಳನ್ನು ಮಾಡಿ ಅದರೊಳಗೆ ತಲೆಯನ್ನಿಟ್ಟು ಬಿಗಿಯತೊಡಗಿದ್ದಳು.

ಇತ್ತ....ರಾಜರಾಜೇಶ್ವರಿ ನಗರದ ಹೊರವಲಯದಲ್ಲಿರುವ ಮನೆಯಲ್ಲಿ ಹೇಮಂತ ನಿದ್ರೆ ಬಾರದೆ ಹೊರಳಾಡುತ್ತಲೇ ಇದ್ದ. ತಾಯಿಯನ್ನು ಎರಡು ದಿನಗಳ ಹಿಂದಷ್ಟೇ ಸಂಬಂಧಿಕರ ಮದುವೆಗೆಂದು ಮೈಸೂರಿಗೆ ಕಳುಹಿಸಿದ್ದ. ಹಾಗಾಗಿ ಮನೆಯಲ್ಲಿ ಅವನೊಬ್ಬನೇ. ಈ ದಿನ ಅವನಿಗೂ ಸಾಕಷ್ಟು ದಣಿವಾಗಿತ್ತು. ಸರಣಿ ಕೊಲೆಗಾರನನ್ನು ಕಂಡುಹಿಡಿಯುವುದಕ್ಕೆ ತನ್ನ ಶಕ್ತಿಮೀರಿ ಯತ್ನಿಸಿ ಅದರಲ್ಲಿ ಯಶಸ್ವಿಯೂ ಆಗಿದ್ದ. ಆದರೆ ಆ ಭೀಕರ ಕೊಲೆಗಳನ್ನು ಮಾಡಿದವನು ಋತುವಿನ ತಮ್ಮ ಭರತನೇ ಆಗಿದ್ದುದು ಮಾತ್ರ ವಿಪರ್ಯಾಸ. ಈ ದಿನ ಭರತ ಅರೆಸ್ಟ್ ಆದಾಗ ಕೋಟೆ ಬಂಗಲೆಯವರಿಗೆ ಆದ ಆಘಾತವನ್ನು ಅವನು ಊಹಿಸಬಲ್ಲವನಾಗಿದ್ದ. ಸೂಕ್ಷ್ಮ ಮನಸ್ಸಿನ ಋತು ಇದನ್ನು ಹೇಗೆ ಸ್ವೀಕರಿಸಬಹುದು ಎಂಬುದೇ ಅವನ ಚಿಂತೆಯಾಗಿತ್ತು. ಅವಳೊಂದಿಗೆ ಏಕಾಂತವಾಗಿ ಮಾತನಾಡುವ ಸಂದರ್ಭವೂ ಬಂದಿರಲಿಲ್ಲ.

ಅವಳ ಬಗ್ಗೆ ಯೋಚಿಸುತ್ತಲೇ ಹೊರಳಾಡುತ್ತಿದ್ದವನಿಗೆ ತನ್ನ ಮೊಬೈಲಿಗೆ ಮೆಸೇಜೊಂದು ಬಂದುದು ಅದರ ಶಬ್ದದಿಂದಲೇ ತಿಳಿಯಿತು. ಇಷ್ಟು ಹೊತ್ತಿಗೆ ಯಾರು ಮಾಡುತ್ತಿರಬಹುದು?....ಯೋಚಿಸುತ್ತಲೇ ಪಕ್ಕದಲ್ಲಿದ್ದ ಮೊಬೈಲನ್ನು ಕೈಗೆತ್ತಿಕೊಂಡು ಮೆಸೇಜನ್ನು ಓದಿದ. ಆ ಚಳಿಯಲ್ಲೂ ಮೈ ಬೆವರಿತು. ಋತು ಯಾವುದೋ ತಪ್ಪಾದ ನಿರ್ಧಾರವನ್ನು ತೆಗೆದುಕೊಂಡಿರಬೇಕು....ಖ್ಯಾತ ಪತ್ತೇದಾರನಿಗೆ ಮೊದಲ ಬಾರಿ ಭಯವಾಗತೊಡಗಿತ್ತು. ತನ್ನ ಪ್ರೀತಿಯ ಹುಡುಗಿಗೆ ಏನಾದರೂ ಅಪಾಯವಾದರೆ ತಾನಿನ್ನು ಬದುಕಿರಲು ಸಾಧ್ಯವೇ?....ರಕ್ತದ ಕಣಕಣದಲ್ಲೂ ಋತು ಬೆರೆತುಹೋಗಿದ್ದಾಳೆ. ತನ್ನನ್ನು ಒಂಟಿಯಾಗಿ ಬಿಟ್ಟು ಅವಳು ಸಾಯಲು ಹೊರಟಿದ್ದಾಳೆಯೇ?..

ತಡಮಾಡದೆ ಹೇಮಂತ ಋತುವಿನ ನಂಬರಿಗೆ ಕರೆ ಮಾಡಿದ.

ಮೊಬೈಲು ಸುಶ್ರಾವ್ಯವಾಗಿ ಹಾಡಿತು. ಆ ರಾತ್ರಿಯ ನೀರವತೆಯಲ್ಲಿ ಅದರ ಸಂಗೀತ ಜೋರಾಗಿಯೇ ಕೇಳಿದಾಗ ಗಾಢನಿದ್ರೆಯಲ್ಲಿದ್ದ ರಮ್ಯ ಬೆಚ್ಚಿ ಕಣ್ತೆರೆದಿದ್ದಳು. ಈ ಅಪರಾತ್ರಿಯಲ್ಲಿ ಇದು ಯಾರ ಕರೆ ಇರಬಹುದು...? ಅವಳು ಕಣ್ಬಿಟ್ಟಾಗ ಪಕ್ಕದಲ್ಲಿ ಋತು ಕಾಣಲಿಲ್ಲ. ಬೆಳದಿಂಗಳ ಮಸುಕು ಬೆಳಕಿನಲ್ಲಿ ಅವಳು ಫ್ಯಾನಿಗೆ ನೇಣು ಹಾಕಿಕೊಳ್ಳುತ್ತಿರುವುದನ್ನು ಕಂಡು ಬೆಚ್ಚಿದಳು. ಸದ್ಯಕ್ಕೆ ಮೊಬೈಲಿನ ಗೊಡವೆಯನ್ನು ಬಿಟ್ಟು ಮೇಲೆದ್ದು ನೇಣು ಹಾಕಿಕೊಳ್ಳುತ್ತಿದ್ದ ಋತುವನ್ನು ತಡೆದು, ಸೀರೆಯನ್ನು ಕಿತ್ತು ದೂರ ಬಿಸಾಡಿದಳು.

'ಪ್ಲೀಸ್ ರಮ್ಯ, ನನ್ನ ಬಿಟ್ಬಿಡು, ನಾನು ಸಾಯ್ಬೇಕು...' ಋತು ಒಂದೇ ಸಮನೆ ಅಳತೊಡಗಿದ್ದಳು.

'ಆಯ್ತು ಸಾಯೋವಂತೆ, ಮೊದ್ಲು ನನ್ನ ಹಾಗೂ ಹೇಮಂತನನ್ನು ಸಾಯ್ಸಿ ನಂತರ ನೀನು ಧಾರಾಳವಾಗಿ ಸಾಯ್ಬಹುದು, ಇದೆಲ್ಲಾ ಏನು ಋತು?....ನಿಂಗೇನಾದ್ರೂ ಬುದ್ಧಿ ಇದ್ಯಾ, ಮೊಬೈಲ್ ಕಾಲ್ ನಿನ್ನ ಜೀವಾನ ಉಳ್ಸಿದೆ, ಇಲ್ಲದಿದ್ರೆ ನಂಗೆ ಎಚ್ಚರವೇ ಆಗ್ತಿರಲಿಲ್ಲ..' ರಮ್ಯ ಜೋರು ಮಾಡಿದಾಗ ಋತು ಮೆತ್ತಗಾದಳು.

'ನಂಗೆ ಭರತ ಹೀಗೆ ಮನುಷ್ಯರ ರಕ್ತ ಹೀರುವ ಸೈತಾನನಾಗಿ ಬದಲಾಗಿದ್ದಾನೆ ಅನ್ನೋದನ್ನು ಒಪ್ಪಿಕೊಳ್ಳೋಕೆ ಆಗ್ತಿಲ್ಲ ಕಣೆ, ಅದಕ್ಕೆ...' ಅರ್ಧಕ್ಕೆ ಮಾತು ನಿಲ್ಲಿಸಿದಳು ಋತು.

'ಅದಕ್ಕೆ ಸಾಯೋ ನಿರ್ಧಾರ ಮಾಡ್ದೆ ಅಲ್ವಾ?....ಋತು...ಅಪ್ಪಾಜಿ ನಿಂಗೆ ಎಷ್ಟು ದೊಡ್ಡ ಜವಾಬ್ದಾರಿ ಹೊರಿಸಿದ್ದಾರೆ ಅಂತ ನಿಂಗೂ ಗೊತ್ತು, ನಿಮ್ಮ ತಾಯಿ ಏನಾಗಿದ್ದಾರೆ ಅನ್ನೋದನ್ನು ನೀನು ತಿಳಿದುಕೊಳ್ಬೇಕು, ಈ ಕೋಟೆ ಬಂಗಲೆಯಲ್ಲಿ ಆಟವಾಡ್ತಿರೋ ಕಾಣದ ಶಕ್ತಿಗಳಿಗೆ ನೀನೀಗ ಪಾಠ ಕಲಿಸ್ಬೇಕು, ಇವೆಲ್ಲವನ್ನೂ ಮರ್ತು ಹೇಡಿ ಥರಾ ಸಾಯೋಕೆ ಹೊರಟಿದ್ದಿಯಲ್ಲ, ನೀನಿಲ್ದೆ ಹೇಮಂತ ಬದುಕಿರ್ತಾನೇನೇ...?' ರಮ್ಯ ದಬಾಯಿಸಿದಾಗ ಋತು ಇನ್ನೂ ಕರಗಿದಳು.

**(ಸಶೇಷ)**